**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ :25.03.2025**

**ಪಾಟೀ ಸವಾಲು - 6,7 ಮತ್ತು 9 ರಿಂದ 12 ನೇ ಪ್ರತಿವಾದಿಗಳ ಪರ ವಕೀಲರಿಂದ :**

ಈ ದಾವೆಯನ್ನು ಟಿ ಎಂ ನಾರಾಯಣಸ್ವಾಮಿ ಮಕ್ಕಳು ದಾಖಲಿಸಿರುತ್ತಾರೆ. ಅಕ್ಕಯ್ಯಮ್ಮ, ಟಿ ಎಂ ನಾರಾಯಣಸ್ವಾಮಿ ಹಾಗೂ ನಾಗರಾಜು ವಿರುದ್ದ ದಾಖಲಿಸಿರುತ್ತಾರೆ. ನಮ್ಮ ತಾತನ ಹೆಸರು ರಾಮಯ್ಯ. ನಮ್ಮ ತಾತನ ತಂದೆ ಹೆಸರು ಮುನಿಯಪ್ಪ. ಅವರಿಗೆ 7 ಜನ ಮಕ್ಕಳು ಇದ್ದು, ಅವರು ಟಿ ಎಂ ನಾರಾಯಣಸ್ವಾಮಿ, ರಾಮಯ್ಯ, ಮುನಿಯಮ್ಮ, ವೆಂಕಟಲಕ್ಷ್ಮಮ್ಮ, ರಾಜಮ್ಮ, ಮುನಿರಾಜ್ ಮತ್ತು ವೆಂಕಟೇಶ್ ಆಗಿರುತ್ತಾರೆ. ರಾಮಯ್ಯರವರು ಈಗ ಮರಣ ಹೊಂದಿರುತ್ತಾರೆ. ಅವರ ಪತ್ನಿ 1 ನೇ ಪ್ರತಿವಾದಿ ಈಗ ಮರಣ ಹೊಂದಿರುತ್ತಾರೆ. ಅವರಿಗೆ ಮುನಿರಾಜಮ್ಮ ಮತ್ತು ರಾಮಮೂರ್ತಿ ಎಂಬ ಇಬ್ಬರು ಮಕ್ಕಳು. ಈ ದಾವೆಯ 3 ನೇ ಪ್ರವಾದಿ ನನ್ನ ತಾಯಿ. ಅವರು ಮರಣ ಹೊಂದಿರುತ್ತಾರೆ. ಅವರಿಗೆ ನಾನು ಮತ್ತು ನನ್ನ ತಂಗಿ ರೇಣುಕಾ ಇಬ್ಬರು ಮಕ್ಕಳು. ನಮ್ಮ ತಾತ ರಾಮಯ್ಯರವರ ಸಹೋದರಿ ಮುನಿಯಮ್ಮ, ವೆಂಕಟಲಕ್ಷ್ಮಮ್ಮ ಮರಣ ಹೊಂದಿರುತ್ತಾರೆ. ವೆಂಕಟಲಕ್ಷ್ಮಮ್ಮರವರಿಗೆ 11 ಮತ್ತು 12 ನೇ ಪ್ರತಿವಾದಿಗಳು ಇಬ್ಬರು ಮಕ್ಕಳು. ಈ ದಾವೆಯನ್ನು ನಾವು ಭಾಗ ಕೋರಿ ದಾಖಲಿಸಿರುತ್ತೇವೆ. ದಾವ ಸ್ವತ್ತು ನಮ್ಮ ಒಟ್ಟು ಕುಟುಂಬಕ್ಕೆ ಸೇರಿರುತ್ತದೆ. ದಾವ ಸ್ವತ್ತಿನ ಸ್ವಾಧೀನವನ್ನು ನಮ್ಮ ಒಟ್ಟು ಕುಟುಂಬದ ಎಲ್ಲಾ ಸದಸ್ಯರು ಹೊಂದಿರುತ್ತೇವೆ. ದಾವ ಸ್ವತ್ತು ವಿಭಾಗ ಆಗಿರುವುದಿಲ್ಲ. ದಾವಾಸ್ತಿ ಒಟ್ಟು ಕುಟುಂಬದ ಎಲ್ಲಾ ಸದಸ್ಯರಿಗೆ ಭಾಗ ಆಗಬೇಕು.

**( 8 ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಾಗಿದ್ದು, ಪಾಟೀ ಸವಾಲಿಗೆ ಸಮಯ ಅವಕಾಶ ನೀಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**

**ದೇವನಹಳ್ಳಿ..**